ದಿನಾಂಕ 19-02-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ಎಮ್.ಎಮ್ ವಕೀಲರಿಂದ.**

ವಾದಿ ಮಲ್ಲಿಕಾರ್ಜುನ ಇವರು ರೇಣುಕಾ, ಲಕ್ಷ್ಮಣ, ಶರಣಪ್ಪ ಇವರ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ದಾವಾ ಜಮೀನು ಸರ್ವೆ ನಂಬರ 482 ಆಗಿರುತ್ತದೆ. ದಾವಾ ಜಮೀನುಗಳ ಹಿಸ್ಸಾ ನಂಬರ ನನಗೆ ಗೊತ್ತಿಲ್ಲ. ದಾವಾ ಜಮೀನು ಗಬ್ಬೂರು ಸೀಮೆಯಲ್ಲಿ ಇರುತ್ತದೆ. ವಾದಿಯ ತಂದೆಯ ಹೆಸರು ಹಂಪಣ್ಣ ಎಂದು ಇರುತ್ತದೆ. ಹಂಪಣ್ಣನ ತಂದೆಯ ಹೆಸರು ಯಂಕಪ್ಪ ತಂದೆ ಯಲ್ಲನಗೌಡ ಎಂದು ಇರುತ್ತದೆ. ಯಂಕಪ್ಪ ತಂದೆ ಯಲ್ಲನಗೌಡ ಮೃತಪಟ್ಟು ಎಷ್ಟು ವರ್ಷ ಆಗಿರುತ್ತದೆ ನನಗೆ ಗೊತ್ತಿಲ್ಲ. ಯಂಕಪ್ಪನ ಸ್ವಂತ ಊರು ಬಾಗಲವಾಡ ಗ್ರಾಮ ಆಗಿರುತ್ತದೆ. ಯಂಕಪ್ಪನಿಗೆ ಹಂಪಣ್ಣ ಎಂಬ ಒಬ್ಬನೇ ಗಂಡು ಮಗನಿರುತ್ತಾನೆ ಹಾಗೂ ಓರ್ವ ಹೆಣ್ಣು ಮಗಳಿದ್ದು ಅವಳ ಹೆಸರು ನನಗೆ ಗೊತ್ತಿರುವುದಿಲ್ಲ. ಯಂಕಪ್ಪನಿಗೆ ಬಾಗಲವಾಡದಲ್ಲಿ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಯಂಕಪ್ಪ ನನಗೆ ಸಂಬಂಧಿಕನಿರುವುದಿಲ್ಲ. ಪ್ರತಿವಾದಿ ನಂಬರ 4 ಮತ್ತು 5 ರವರೂ ಸಹ ನನಗೆ ಸಂಬಂಧಿಕರಾಗಿರುವುದಿಲ್ಲ. ಯಂಕಪ್ಪ ದಾವಾ ಸ್ವತ್ತುಗಳನ್ನು ಯಾವಾಗ ಖರೀದಿ ಮಾಡಿರುತ್ತಾನೆ ನನಗೆ ಗೊತ್ತಿರುವುದಿಲ್ಲ ಆದರೆ ಗಬ್ಬೂರು ಶಾಂತಣ್ಣ ಇವರಿಂದ ಖರೀದಿ ಮಾಡಿರುತ್ತಾನೆ. ಗಬ್ಬೂರು ಶಾಂತಣ್ಣನಿಂದ ಖರೀದಿ ಮಾಡಿರುವ ವಿಚಾರವನ್ನು ನನಗೆ ಯಾರು ಹೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಯಾರು ಹೇಳಿರುವುದಿಲ್ಲ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 356 ಕ್ಷೇತ್ರ 16 ಎಕರೆ ಚಿಲ್ಲರೆ ಗುಂಟೆ ಬಾಗಲವಾಡ ಸೀಮೆಯಲ್ಲಿ ಯಂಕಪ್ಪನ ಪಿತ್ರಾರ್ಜಿತ ಸ್ವತ್ತು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 356 ನ್ನು ಯಂಕಪ್ಪ ಮತ್ತು ಹಂಪಣ್ಣ 1981-82 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಿತ್ರಾರ್ಜಿತ ಜಮೀನು ಮಾರಾಟ ಮಾಡಿ ಬಂದ ಹಣದಿಂದ ಗಬ್ಬೂರು ಸೀಮೆಯಲ್ಲಿ ದಾವಾ ಜಮೀನುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ಪಡೆದಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಹಂಪಣ್ಣ ಮತ್ತು ಆತನ ಮಕ್ಕಳಿಗೆ ಹಕ್ಕು ಇದೆ ಎಂದರೆ ಸಾಕ್ಷಿ ಇರಬಹುದು ಆದರೆ ನಾವು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಯಂಕಪ್ಪ ಪ್ರತಿವಾದಿ ನಂಬರ 4 ಮತ್ತು 5 ರವರಿಗೆ ಯಾವ ವರ್ಷ ದಾವಾ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು 1992 ರಲ್ಲಿ ಯಂಕಪ್ಪ ಮತ್ತು ಹಂಪಣ್ಣ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಶಿವಪ್ಪ ಮತ್ತು ಸಿದ್ದಯ್ಯ ಕ್ರಯಪತ್ರದ ಮೇಲೆ ಸಹಿ ಮಾಡಿರುತ್ತಾರೆ, ಬೇರೆ ಯಾರು ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ

ಜಮೀನನ್ನು 50,000/- ರೂ. ಬೆಲೆಗೆ ಮಾರಾಟ ಮಾಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ಮಲ್ಲಿಕಾರ್ಜುನನಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಯಂಕಪ್ಪ ಜೀವಿತ ಇದ್ದಾಗ ಸೊಲ್ಲಾಪುರದ ದಾರದ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದ. ಸದರಿ ಯಂಕಪ್ಪ ಎಷ್ಟು ವರ್ಷ ಮಿಲ್ಲಿನಲ್ಲಿ ಕೆಲಸ ಮಾಡಿರುತ್ತಾನೆ ನನಗೆ ಗೊತ್ತಿಲ್ಲ. ಯಂಕಪ್ಪನಿಗೆ ಮಾಸಿಕ ಸಂಬಳ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಯಂಕಪ್ಪನ ಮಗ ಹಂಪಣ್ಣ ಮತ್ತು ಆತನ ಕುಟುಂಬ ಸೊಲ್ಲಾಪುರದಲ್ಲಿಯೇ ವಾಸವಾಗಿತ್ತು. ಪ್ರತಿವಾದಿ 4 ಮತ್ತು 5 ರವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ದಾವಾ ಸ್ವತ್ತಿನ ಮೇಲಿನ ಹಕ್ಕನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.